ತದ್ರೂಪುಗೊಳಿಸಿದ್ದರು. ಅವಕಾಶವೇ ಇರದ ಈ ಮಕ್ಕಳ ಪ್ರತಿಭೆಯನ್ನು ಕಂಡು ಬೆರಗಾದ ವಸಂತ ಟೀಚರ್ ಈ ವರ್ಷ ಶಾಲಾ ವಾರ್ಷಿಕೋತ್ಸವ ಮಾಡಿ ಎಲ್ಲರ ಎದುರಿಗೆ ಮಕ್ಕಳ ಪ್ರತಿಭೆಯನ್ನು ಪ್ರದರ್ಶನಕ್ಕಿಡಬೇಕೆಂದು ಅಂದೇ ಡಿಸೈಡ್ ಮಾಡಿದರು.

ಅದರಂತೆಯೇ ಆಕಾಡೆಮಿಕ್ ವರ್ಷದ ಕೊನೆಯ ದಿನಗಳಲ್ಲಿ ಡ್ಯಾನ್ಸ್ ಪ್ರಾಕ್ಟೀಸ್ ಎಂದು ಘೋಷಣೆ ಮಾಡಿ ತರಬೇತಿ ನೀಡತೊಡಗಿದರು. ಮೈಕಿನ ಸೌಂಡ್ ಕೇಳಿದ್ದೇ ತಡ, ಅಕಸ್ಮಾತ್ ಮನೆಯಲ್ಲಿ ಉಳಿದಿದ್ದ ಮಕ್ಕಳು ತಾವು ಮಾಡುತ್ತಿದ್ದ ಕೆಲಸವನ್ನು ಅಲ್ಲೇ ಬಿಸಾಕಿ ಪೇರಿಕಿತ್ತು ತರಗತಿಯಲ್ಲಿ ಪ್ರತ್ಯಕ್ಷವಾಗಿ ತಾ ಮೇಲು ನಾ ಮೇಲು ಎಂದು ಮುಗಿಬೀಳತೊಡಗಿದವು. ಅವರ ಹಿಂದೆಯೇ ಬರುತ್ತಿದ್ದ ಅವ್ವಂದಿರು ಅಕ್ಕಂದಿರು ತಮ್ಮ ಮಕ್ಕಳ ಕುಣಿತವನ್ನು ಕಿಟಕಿಯಲ್ಲಿ ನಿಂತು ಆಸೆಯಿಂದ ಕಣ್ತುಂಬಿಕೊಳ್ಳತೊಡಗಿದರು. ಶಾಲೆಗೆ ಎಂದೂ ಬಾರದಿದ್ದ ಮಕ್ಕಳೂ ಬರತೊಡಗಿದವು. ಶಾಲೆಗೆ ಅಡ್ಮಿಷನ್ ಆಗದೆ ಇದ್ದ ಮಕ್ಕಳೂ ಸಹ ತಮ್ಮ ಅವ್ವಂದಿರ ಶಿಫಾರಸ್ಸು ತಂದು ಡ್ಯಾನ್ಸಿಗೆ ಸೇರಿಕೊಳ್ಳತೊಡಗಿದರು. ಅಂತೂ ಶಾಲೆ ದಿನೇ ದಿನೆ ರಂಗೇರತೊಡಗಿತು. ರಾತ್ರಿ ಎಂಟಾದರೂ ಪ್ರಾಕ್ಟೀಸ್ ನಡೆಯುತ್ತಲೇ ಇರುತ್ತಿತ್ತು. ಒಂದಿನ ಎಷ್ಟೊತ್ತಾದರೂ ಹೆಂಡ್ತಿ ಮತ್ತು ಮಗ ಪತ್ತೆ ಇಲ್ಲದ್ದನ್ನು ಕಂಡ ಗಡ್ಗ ರೋಷದಿಂದ 'ಇವ್ರ್ ಸಾಕ್ತೋಳ್ನಾಕ್ಯಾಯ, ಇವ್ರಿಗೇನು ಹೇಳರು ಕೇಳರು ಇಲ್ವ, ಹಿಟ್ಟೇನು ನೀರೇನು ಅನ್ನಿಲ್ಲ ಬಂದು ಇಲ್ಲೇನ ಬಿಚ್ಕಂಡು ಕುಣಿತಾವಂತೆ' ಅಂತ ಬೀದಿಲಿ ಬಿದ್ದಿದ್ದ ಎಡಮಟ್ಟೆ ಹಿಡಿಕಂಡೇ ಬಂದಿದ್ದ. ವಸಂತ ಮೇಡಮ್ ಗಡ್ಗನ ಆರ್ಭಟಕ್ಕೆ ತುಸು ಹೆದರಿದರಾದರೂ, ಕುಡಿದು ಬಂದಿದ್ದ ಅವನನ್ನು ನೆರದಿದ್ದ ಹೆಂಗಸರೇ ಬಾಯಿಮಾಡಿ ಕಳುಹಿಸಿದ್ದರಿಂದ ಸ್ವಲ್ಪ ಸಮಾಧಾನಗೊಂಡಿದ್ದರು. ಮರುದಿನ ಗಲಾಟೆ ಮಾಡಲು ಬಂದಿದ್ದ ಗಡ್ಗನ ಪೂರ್ವಾಪರವನ್ನು ಪತ್ತೆಹಚ್ಚಿದಾಗ ಈ ಶಾಲೆಗೆ ಬಂದ ಹೊಸದರಲ್ಲಿ ಮೇಡಮ್‌ಗೆ ಸಿಕ್ಕ ವಿಶೇಷ ವಿದ್ಯಾರ್ಥಿಯೊಬ್ಬ ನೆನಪಾದ.

ಆ ದಿನ ಮೇಡಮ್ ಏಳನೇ ತರಗತಿ ವಿದ್ಯಾರ್ಥಿಗಳಿಗೆ ಕನ್ನಡ ವ್ಯಾಕರಣದಲ್ಲಿ ದ್ವಂದ್ವ ಸಮಾಸದ ಬಗೆಗೆ ಪಾಠ ಮಾಡುತ್ತಿದ್ದರು. ಹಲವು ಪದಗಳು ಸೇರಿ ಒಂದೇ ಪದವಾಗಿರುವುದಕ್ಕೆ ದ್ವಂದ್ವ ಸಮಾಸ ಎನ್ನುವರು. ಅವುಗಳನ್ನು ಬಿಡಿಸುವುದಕ್ಕೆ ವಿಗ್ರಹ ವಾಕ್ಯ ಎನ್ನುವರು ಎಂದು ಹೇಳುತ್ತ ಉದಾಹರಣೆಗೆ 'ಗಿಡಮರಬಳ್ಳಿ' ಅದನ್ನು ಬಿಡಿಸಿದಾಗ ಗಿಡವೂ ಮರವೂ ಬಳ್ಳಿಯೂ ಎಂದಾಗುತ್ತದೆ ಎಂದು ವಿವರಿಸಿದ್ದರು. ನಂತರ ಇದೇ ರೀತಿಯ ಮತ್ತೊಂದು ಉದಾಹರಣೆ ಕೊಡಿ ಎಂದು ಮಕ್ಕಳನ್ನು ಒತ್ತಾಯಿಸಿದಾಗ ಎಲ್ಲಾ ಮಕ್ಕಳೂ ತಮಗೆ ಗೊತ್ತಿರುವಂತೆ ರಾಮಲಕ್ಷ್ಮಣಸೀತೆ ಇತ್ಯಾದಿ ಉದಾಹರಣೆ ಕೊಡುತ್ತಿದ್ದರು. ಮಸಿಯ ಎಂಬ ವಿದ್ಯಾರ್ಥಿಯ ಸರದಿ ಬಂದಾಗ ಎದ್ದು 'ಸಾಕ್ತೋಳ್ನಾಕ್ಯಾಯ' ಎಂದಿದ್ದ. ಎಲ್ಲಾ ಗೊಳ್ ಎಂದು ನಗುತ್ತಿರಲು ಮೇಡಮ್‌ಗೆ ತಕ್ಷಣಕ್ಕೆ ನನ್ನನ್ನೇ ಬೈಯ್ಯುತ್ತಿದ್ದಾನೆ ಎನಿಸಿದರೂ, ಆತನಿಂದ ಬಂದ ಶಬ್ದ ಮೆದುವಾಗಿ ಉತ್ತರದಂತೆಯೇ ಇದ್ದುದರಿಂದ ತುಸು ಮೌನತಾಳಿದರು. ತಕ್ಷಣವೇ ಅದನ್ನು ಬೋರ್ಡ್ ಮೇಲೆ ಬರೆದು ಮಸಿಯನಿಂದಲೇ ವಿಗ್ರಹಗೊಳಿಸಲು ಕೇಳಿದರು. ಮಸಿಯಾ ಸಾಕಿದವಳೂ, ತೋಳನೂ, ಅಕ್ಯಾಯ ಇತ್ಯಾದಿ ಪ್ರಯತ್ನಪಡುತ್ತಿರುವಾಗ... ಮಸಿಯನ ಮನೆಯ ಭಾಷೆ, ನುಡಿಗಟ್ಟು, ಪದಪ್ರಯೋಗ ಅದರ ಅನನ್ಯತೆ ಕಂಡು ಬೆರಗಾದರು. ಅವನ ಪ್ರಯತ್ನವನ್ನು ಅಲ್ಲಗಳೆಯಲಾಗಲಿಲ್ಲ. ಈ ಪದ ನಿನ್ಗೆ ಎಲ್ಲಿ ಸಿಗ್ತೋ ಎಂದಾಗ, ಮಸಿಯನಿಗಿಂತ ಮುಂಚಿತವಾಗಿ ಉಳಿದ ವಿದ್ಯಾರ್ಥಿಗಳೇ 'ಅವ್ರಪ್ಪ ಯಾವಾಗ್ಲು ಅಂಗಂತ ಬೈತಿರುತ್ತೆ ಮಿಸ್' ಎಂದವು. ಮಲಗಿದಾಗಲೂ ಬಿಡದೆ ಕಾಡುತ್ತಿದ್ದ ಈ ದ್ವಂದ್ವ ಬೈಗುಳದ ಕುರಿತು ವಸಂತ ಮೇಡಮ್ ಯೋಚಿಸತೊಡಗಿದರು. ಸಾಕಿದವಳು, ಹೆತ್ತವಳು ಬೇರೆ ಬೇರೆ ಇರಬಹುದಾ, ಇಲ್ಲಿ ತೋಳ ಯಾಕೆ ಬಂತು ಇತ್ಯಾದಿ ತಲೆಕೆಡಿಸಿಕೊಂಡರು. ಏಳನೇ ತರಗತಿ ಕೊನೆಯಲ್ಲಿದ್ದ ಈ ವಿಶೇಷ ವಿದ್ಯಾರ್ಥಿ ಬಹಳದಿನವೇನು ಮೇಡಮ್ ಕೈಗೆ ಸಿಕ್ಕಿರಲಿಲ್ಲ. ಆತನ ಕಿರಿಯ ತಮ್ಮನೇ ಈ ತಮಟೆ ಸಿದ್ದ ಎಂದು ತಿಳಿದು ಮೇಡಮ್‌ಗೆ ಒಳೊಳಗೇ ಖುಷಿಯಾಯಿತು. ಆ ಮಸಿಯ, ಈ ಸಿದ್ದನ ತಂದೆಯೇ ಗಡ್ಗ ಎಂದು ಗೊತ್ತಾಗಿ 'ಎಲ್ಲೋ ನಿಮ್ಮಪ್ಪ ಎಂದೂ ಸ್ಕೂಲ್ ಕಡಿಕೆ ಬರಲ್ಲ' ಎಂದು ಮೇಡಮ್ ವಿಚಾರಿಸಿದಾಗ 'ಅಯ್ಯೋ ಇವ್ರಪ್ಪ ಬಾಯಿ ಬಿಟ್ರೆ ಹಲ್ಕ ಮಾತು ಬೈಯುತ್ತೆ ಟೀಚರ್. ಅದ್ಕೆ ಯಾರೂ ಎಲ್ಲಿಗೂ ಕರಿಯಲ್ಲ ಇವ್ರಪ್ಪುನ್ನ, ತಾನಾತು ತನ್ನ ಮುನ್ಸಿಪಾಲ್ಟಿ ಕೆಲ್ಸಾಯ್ತು ಅಂತ ಬೆಳಿಗ್ಗೆದ್ದು ಹೋಗ್ತಿರುತ್ತೆ'